

# ಅತಿದೊಡ್ಡ ಫಿರಂಗಿ 'ಜೈವಾನ್'

ರಾಜಸ್ತಾನದ ಜೈಗಢ ಕೋಟೆಯಲ್ಲಿರುವ 18ನೇ ಶತಮಾನದ 'ಜೈವಾನ್' ಹೆಸರಿನ ಫಿರಂಗಿಯು ವಿಶ್ವದಲ್ಲೇ ಅತ್ಯಂತ ದೊಡ್ಡದಾದ ಗಾಲಿಗಳುಳ್ಳ ಶಸ್ತ್ರಾಸ್ತ್ರವೆಂದು ಪ್ರಸಿದ್ಧಿಗೊಂಡಿದೆ.

1720ರಲ್ಲಿ ಎರಕ ಹೊಯ್ದಿರುವ ಈ ಫಿರಂಗಿಯನ್ನು ಎರಡನೇ ಸವಾಯಿ ರಾಜಾ ಜೈಸಿಂಗ್ ಎಂಬವನು ನಿರ್ಮಿಸಿದನೆಂದು ಹೇಳಲಾಗುತ್ತದೆ. ಬಲಶಾಲಿ ಯೋಧ ಹಾಗೂ ಯುದ್ಧ ಸಾಮಗ್ರಿಗಳ ಪೂರೈಕೆಯಲ್ಲಿ ಸಮರ್ಥನೆಂದು ಹೆಸರು ಗಳಿಸಿಕೊಂಡಿದ್ದ ಈತ ಮೊಘಲ್ ಚಕ್ರವರ್ತಿ ಮೊಹಮ್ಮದ್ ಷಾನ ಆಳ್ವಿಕೆಯಲ್ಲಿ ಜೈಪುರ ಕೋಟೆಯ ಆಡಳಿತಗಾರನಾಗಿದ್ದ.

ಸುಮಾರು 6.15 ಮೀಟರ್ (20.2 ಅಡಿ) ಉದ್ದ ಹಾಗೂ 50 ಟನ್ ಭಾರವುಳ್ಳ ಈ ಫಿರಂಗಿಯನ್ನು ದೊಡ್ಡ ಗಾಲಿಗಳ ಮೇಲೆ ಇರಿಸಲಾಗಿದೆ. ಎರಡು ಚಕ್ರಗಳು 1.37 ಮೀಟರ್ (4.5 ಅಡಿ) ವ್ಯಾಸವನ್ನು ಹೊಂದಿದ್ದರೆ ಸಾಗಾಣಿಕೆಗೆ ಅನುಕೂಲವಾಗುವಂತಹ ಎರಡು ಹೆಚ್ಚುವರಿ ಚಕ್ರಗಳು 2.74 ಮೀಟರ್ (9.0 ಅಡಿ)ಗಳಷ್ಟು ಸುತ್ತಳತೆಯನ್ನು ಹೊಂದಿವೆ. ಬ್ಯಾರೆಲ್‌ನ ತುದಿಯ ಸುತ್ತಳತೆ 2.2 ಮೀಟರ್ ಹಾಗೂ ಹಿಂಭಾಗದ ಆಯಾಮವು 2.8 ಮೀಟರ್ ವ್ಯಾಸವನ್ನು ಹೊಂದಿದೆ. ಬ್ಯಾರೆಲ್‌ನ ದಪ್ಪ 21.6 ಸೆಂಟಿ ಮೀಟರ್ ಹಾಗೂ ರಂಧ್ರದ ವ್ಯಾಸವು 28 ಸೆಂಟಿ ಮೀಟರ್ ಇದೆ.

ಕ್ರೇನ್‌ನಿಂದ ಎತ್ತಲು ಸಹಾಯಕವಾಗುವಂತೆ ಫಿರಂಗಿಯಲ್ಲಿ ಎರಡು ದಪ್ಪನೆಯ ರಿಂಗ್‌ಗಳನ್ನು ಮತ್ತು ಬ್ಯಾರೆಲ್ ಅನ್ನು ಮೇಲೆತ್ತಲು ಹಾಗೂ ಕೆಳಗಿಸಲು 776 ಮಿಲಿ ಮೀಟರ್ (30.6 ಇಂಚು) ಉದ್ದದ ತಿರುಪನ್ನು ಅಳವಡಿಸಲಾಗಿದೆ. ಹೂವಿನಿಂದ ಕೂಡಿರುವ ವಿನ್ಯಾಸವನ್ನು ಬ್ಯಾರೆಲ್‌ನಲ್ಲಿ ಕಾಣಬಹುದು. ಬ್ಯಾರೆಲ್ ತುದಿಯಲ್ಲಿ ಆನೆ ಚಿತ್ರವನ್ನು , ಮಧ್ಯ ಭಾಗದಲ್ಲಿ ಜೋಡಿ ನವಿಲುಗಳನ್ನು ಹಾಗೂ ಹಿಂಭಾಗದಲ್ಲಿ ಜೋಡಿ ಬಾತುಕೋಳಿಗಳ ಚಿತ್ರಗಳಿಂದ ಅಲಂಕರಿಸಲಾಗಿದೆ.

■ ವಿನಯ್‌ಕುಮಾರ್ ಬಿ.ಎಚ್.

